ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) ಹೌದು.

ಆ) 1999-2000ರ ಸಾಲಿನಲ್ಲಿ ಒಟ್ಟು ರೂ. 32,42,622 ರಸ್ತೆ ಕರವನ್ನು ಸಂಗ್ರಹಿಸಲಾಗಿದೆ.

ಇ) ಅನ್ವಯವಾಗುವ ಮಾರ್ಗಸೂಚಿಗಳಂತೆ 1999-2000ರ ಸಾಲಿನಲ್ಲಿ ಸಂಗ್ರಹವಾದ ಹಣವನ್ನು 2001-02ನೇ ಸಾಲಿನಲ್ಲಿ ಖರ್ಚು ಮಾಡಬೇಕಾಗಿದ್ದು, ಈ ಬಗ್ಗೆ ಕಾರ್ಖಾನೆಯಿಂದ ಪ್ರಸ್ತಾವನೆ ನಿರೀಕ್ಷಿಸಲಾಗಿದೆ.

ಈ) ಕಾರ್ಖಾನೆಯ ಪ್ರಸ್ತಾವನೆಯು ಬಂದ ನಂತರ 2001-02ನೇ ಸಾಲಿನಲ್ಲಿ ಮಂಜೂರ್ಮಾಡಲು ಬರುತ್ತದೆ.

ಶ್ರೀ ಎಸ್.ಎ. ರವೀಂದ್ರನಾಥ್ :— ಅಧ್ಯಕ್ಷರೇ ದಾವಣಗೆರೆ ಸಕ್ಕರೆ ಕಂಪನಿ ರಸ್ತೆ ನಿರ್ವಹಣೆಗೆ ಒಂದು ಟನ್ನಿಗೆ 10 ರೂನಂತೆ 32,42,622 ರೂಗಳನ್ನು ಎರಡು ವರ್ಷಗಳ ಹಿಂದೆ ಸಂಗ್ರಹಿಸಿತ್ತು. ಆದರೆ ಇವತ್ತಿಗೂ ಅದು ರಸ್ತೆ ನಿರ್ವಹಣೆ ಮಾಡಿಲ್ಲ. ಇನ್ನೊಂದು ತಿಂಗಳು ಬಿಟ್ಟರೆ ಮತ್ತೆ ಈ ವರ್ಷವೂ ಕಬ್ಬು ಕಡಿಯಬೇಕಾಗುತ್ತದೆ, ಅಲ್ಲೆಲ್ಲಾ ಓಡಾಡುವಂಥವುಗಳು ಎಂದರೆ ಟ್ರ್ಯಾಕ್ಟರ್ ಮತ್ತು ಎತ್ತಿನ ಬಂಡಿಗಳು. ಆದ್ದರಿಂದ ಆದಷ್ಟು ಬೇಗ ಹಣ ಖರ್ಚು ಮಾಡಿ ರಸ್ತೆ ರಿಪೇರಿ ಮಾಡಿಸಬೇಕು.

ಶ್ರೀ ಎ. ಕೃಷ್ಣಪ್ಪ :— ಅಧ್ಯಕ್ಷರೇ, ಈ ವರ್ಷದಲ್ಲಿ ಸಂಗ್ರಹಿಸಿರುವ ಮೊಬಲಗನ್ನೂ ಸೇರಿಸಿ ನಾನು ಅದನ್ನು ಕಾರ್ಯಗತಮಾಡಿಸಿಕೊಡುತ್ತೇನೆ. ಇದು ನಮ್ಮ ಕರ್ತವ್ಯವೂ ಹೌದು.

Mr. SPEAKER :— It is an assurance given on the floor of the House. Don't worry.

ಕೊರಟಗೆರೆ ತಾಲ್ಲೂಕಿನಲ್ಲಿ ಮಾಸಾಶನ ಪಡೆಯುತ್ತಿರುವ ಕಲಾವಿದರು.

255(2258) ಶ್ರೀ ಟಿನ್ನಿಗಪ್ಪ ಸಿ. (ಕೊರಟಗೆರೆ) :— ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿ ಸರ್ಕಾರದ ವತಿಯಿಂದ ಕಲಾವಿದರ ಮಾಸಾಶನ ಪಡೆಯುತ್ತಿರುವ ಕಲಾವಿದರ ಸಂಖ್ಯೆ ಎಷ್ಟು? ಯಾವ ಯಾವ ಕಲಾವಿದರಿಗೆ ಸರ್ಕಾರದ ವತಿಯಿಂದ ಮಾಸಾಶನ ಮಂಜೂರು ಮಾಡಲಾಗುವುದು?

ಅ) ಈ ನೀಡುತ್ತಿರುವ ಮಾಹೆಯಾನ ಕಲಾವಿದರ 250-00 ರೂ.ಗಳ ಮಾಸಾಶನ ಧನವನ್ನು ಹೆಚ್ಚಿಸುವ ಯೋಜನೆ ಸರ್ಕಾರದ ಮುಂದಿದೆಯೇ ಈ ಮಾಸಾಶನವನ್ನು ಹೆಚ್ಚಿಸಲು ಕೈಗೊಳ್ಳುವ ಕ್ರಮವೇನು?

ಇ) ಪ್ರಸಕ್ತ ಸಾಲಿನಲ್ಲಿ ಕಲಾವಿದರ ಮಾಸಾಶನ ಪಡೆಯಲು ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಶ್ರೀಮತಿ ರಾಣಿಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವೆಯರು) :—

ಅ) ಒಟ್ಟು 76 ಮಂದಿ.

ಆ) ಸಾಹಿತ್ಯ, ಸಂಗೀತ, ಹರಿಕಥೆ, ಸುಗಮ ಸಂಗೀತ, ಗಮಕ ಕಲೆ, ರಂಗಭೂಮಿ, ಜಾನಪದ ಕಲೆ, ಯಕ್ಷಗಾನ, ಲಲಿತಕಲೆ, ಹಾಗೂ ಶಿಲ್ಪಕಲೆಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಅಶಕ್ತ ಕಲಾವಿದರಿಗೆ ಮಾಸಾಶನ ನೀಡಲಾಗುತ್ತದೆ.

ಇ) ಅ) ಇದೆ
ಆ) ಪರಿಶೀಲನೆಯಲ್ಲಿದೆ

ಇ) ಒಟ್ಟು 292

ಶ್ರೀ ಸಿ. ಚೆನ್ನಿಗಪ್ಪ :— ಅಧ್ಯಕ್ಷರೇ, ಕನ್ನಡನಾಡು ಸಂಸ್ಕೃತಿ ಮತ್ತು ಕಲೆಗೆ ಹೆಸರುವಾಸಿಯಾದ ನಾಡು. ಪ್ರಪಂಚದಲ್ಲಿ ಯಾವುದೇ ವ್ಯಕ್ತಿ ತನ್ನ ದುಃಖ ಮತ್ತು ಅಸಂತೋಷವನ್ನು ಮರೆತು ಅವನು ಜೀವನದಲ್ಲಿ ಉತ್ತಮವಾಗಿ ನಡೆಯುವಂತಹ ರೀತಿಯಲ್ಲಿ ಕನ್ನಡ ಸಂಸ್ಕೃತಿ ಬೆಳೆದಿದೆ. ರಾಜ್ಯದಲ್ಲಂತೂ ಕನ್ನಡಕ್ಕೆ ಹೆಚ್ಚು ಪ್ರಾತಿನಿಧ್ಯ ಕೊಟ್ಟು ಅಭಿವೃದ್ಧಿ ಸಾಧಿಸಿದ್ದಾರೆ. ಆದರೆ ಕಲಾವಿದರಿಗೆ ಕೊಡುವ ಮಾಸಾಶನ ಕೊಟ್ಟು ಅದರಲ್ಲೂ ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿರುವ ಕಲಾವಿದರಿಗೆ ಎಷ್ಟು ಜನಕ್ಕೆ ನೀಡಲಾಗಿದೆ?

ಶ್ರೀಮತಿ ರಾಣಿ ಸತೀಶ್ :— ಅಧ್ಯಕ್ಷರೇ, ಆ ಅಂಕಿಅಂಶಗಳನ್ನು ಸದಸ್ಯರಿಗೆ ನಾನು ಉತ್ತರದಲ್ಲಿ ಒದಗಿಸಿದ್ದೇನೆ. ಅದನ್ನು ಅವರು ಪರಿಶೀಲಿಸಬಹುದು.

ಧಾರವಾಡ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಸ್ವಂತ ಕಟ್ಟಡ.

242(3398) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ, (ಧಾರವಾಡ) :— ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.